ಶ್ರೀ ಜಗದೀಶ್ ಶೆಟ್ಟರ್:– ಕ್ವೊಶ್ಚನ್ ಆದರೂ ಕಂಪ್ಲೀಟ್ ಆಗಬೇಕಲ್ಲಾ.

ಅಧ್ಯಕ್ಷರು:– ಈ ರೀತಿ ಆದರೆ ಸಭೆ ನಡೆಸುವುದಕ್ಕೆ ಆಗುವುದಿಲ್ಲ. ಈಗ ಒಂದು ಗಂಟೆ ಆಯಿತು. ಮುಗಿಸಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:– ಅವರು ಉತ್ತರ ಕೊಡಲು ತಯಾರಿದ್ದಾರೆ.

ಅಧ್ಯಕ್ಷರು:– ಆಯಿತು, ಎಲ್ಲಿಗೆ ಅಂದರೆ ಅಲ್ಲಿಗೇ. ಒಂದು ಗಂಟೆ ಆದ ಮೇಲೆ ಅಲ್ಲಿಗೇನೇ. ಉತ್ತರ ತೆಗೆದುಕೊಂಡರೋ ಬಿಟ್ಟರೋ, ಅದು ನನಗೆ ಗೊತ್ತಿಲ್ಲ.

ಶ್ರೀ ಬಿ.ಆರ್.ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆ ಅವರಲ್ಲಿ ಕೊನೆಯ ಪ್ರಶ್ನೆ ಕೇಳುತ್ತೇನೆ. ಕ್ರೆಡಿಟ್ ಪ್ಲಾನ್‌ನಲ್ಲಿ ತಾವು ಟಾರ್ಗೆಟ್ ಅಚೀವ್ ಮಾಡಿದ್ದೀರಾ?

ಅಧ್ಯಕ್ಷರು:– ಈಗ ನೀವು ಸಭೆ ನಡೆಸಲು ಕೋಆಪರೇಟ್ ಮಾಡಬೇಕು. ಪ್ರತಿ ಒಂದು ವಿಚಾರದಲ್ಲೂ ಪ್ರತಿ ಒಬ್ಬರೂ ನಿಂತುಕೊಂಡು ನಿಮ್ಮ ನಿಮಗೆ ತಿಳಿದ ಪ್ರಶ್ನೆ ಕೇಳುತ್ತೀರಿ. ಈ ಪ್ರಶ್ನೋತ್ತರ ವೇಳೆಗೆ ಏನಾದರೂ ಮರ್ಯಾದೆ ಇದೆಯಾ?

ಶ್ರೀ ಬಿ.ಆರ್.ಪಾಟೀಲ್:– ಈಗ ಕ್ರೆಡಿಟ್ ಪ್ಲಾನ್ ಟಾರ್ಗೆಟನ್ನು ಅಚೀವ್ ಮಾಡಿದ್ದಾರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಒಂದೇ ಒಂದು.

ಅಧ್ಯಕ್ಷರು:– ಇಲ್ಲ ಇಲ್ಲ, ನಾನು ಯಾರಿಗೂ ಅವಕಾಶ ಕೊಟ್ಟಿಲ್ಲ. ಪ್ರಶ್ನೋತ್ತರ ಮುಗಿದು ಹೋಗಿದೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಆರ್.ವಿ. ದೇಶಪಾಂಡೆ(ಸಹಕಾರ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ 17.03.2005ರ 12ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 81 ಪ್ರಶ್ನೆಗಳ ಪೈಕಿ 74 ಉತ್ತರಗಳನ್ನು ಹಾಗೂ ದಿನಾಂಕ 18.03.2005ರ 13ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 141 ಪ್ರಶ್ನೆಗಳ ಪೈಕಿ 82 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ. **(ಅನುಬಂಧ–1)**

3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಅಧ್ಯಕ್ಷರು:– ಪ್ರಶ್ನೋತ್ತರ ಮುಗಿದಿದೆ. ದಯವಾಡಿ ಕುಳಿತುಕೊಳ್ಳಿ. ಮಾನ್ಯ ಸಿದ್ದರಾಮಯ್ಯನವರು..

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು) ಅವರು:–

1965ರ ಕರ್ನಾಟಕ ಅಬಕಾರಿ ಕಾಯ್ದೆ 71(4)ರ ಪ್ರಕರಣದ ಮೇರೆಗೆ :

1968ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಾವಳಿಗಳ ಅನುಸೂಚಿ ಎ ಮತ್ತು ಡಿ ಗೆ ತಿದ್ದುಪಡಿ ಮಾಡಿ ದಿನಾಂಕ 30.12.2004ರಂದು ಹೊರಡಿಸಲಾದ ಎಫ್‌ಡಿ:24: ಪಿಇಎಸ್:2004ನೇ ಸಂಖ್ಯೆಯ ಅಧಿಸೂಚನೆ.

1958ರ ಮನರಂಜನಾ ತೆರಿಗೆ ಕಾಯ್ದೆ 18ರ ಪ್ರಕರಣದ ಮೇರೆಗೆ :

ಮೆ: ಪ್ರೆಸ್ಟೀಜ್ ಎಸ್ಟೇಟ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್‌ನವರು ಬೆಂಗಳೂರಿನ ಹೊಸೂರು ರಸ್ತೆಯಲ್ಲಿ ಹೊಸದಾಗಿ ಸ್ಥಾಪಿತಗೊಂಡಿರುವ ಮಲ್ಟಿಪ್ಲಕ್ಸ್ ಥಿಯೇಟರ್‌ನಲ್ಲಿ ಪಿವಿಆರ್ ಸಿನಿಮಾ ಮನರಂಜನೆಗಾಗಿ ಮೊದಲ ಮೂರು ವರ್ಷಗಳಿಗೆ ಶೇ. 100 ಹಾಗೂ ನಂತರದ ಎರಡು ವರ್ಷದ ಅವಧಿಗೆ ಶೇ. 75ರಂತೆ ಪಾವತಿಸಬೇಕಾದ ಮನರಂಜನಾ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 21.02.2005ರಂದು ಹೊರಡಿಸಲಾದ ಎಫ್‌ಡಿ:09:ಸಿಇಎಕ್ಸ್:2005ನೇ ಸಂಖ್ಯೆಯ ಅಧಿಸೂಚನೆ.

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 39ರ ಪ್ರಕರಣದ ಮೇರೆಗೆ :

ಅಮೇಥಿಯಲ್ಲಿನ ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ಉಪಯೋಗಿಸಲ್ಪಡುವ ಸಂಚಾರಿ ಚಿಕಿತ್ಸಾಲಯಕ್ಕೆ ಬೆಂಗಳೂರಿನ ಮೆ: ಸೈಮನ್ಸ್ ಲಿಮಿಟೆಡ್‌ನವರು ಪಾವತಿಸಬೇಕಾದ ಮಾರಾಟ ತೆರಿಗೆಗೆ ಸಂಬಂಧಿಸಿದಂತೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 07.02.2005ರಂದು ಹೊರಡಿಸಲಾದ ಎಫ್‌ಡಿ:40:ಸಿಎಸ್‌ಎಲ್:2005ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

4. ಅರ್ಜಿಯನ್ನೊಪ್ಪಿಸುವುದು

ಅಧ್ಯಕ್ಷರು (ಶ್ರೀ ಜೆ. ಕೃಷ್ಣ ಪಾಲೇಮಾರ್ ಅವರ ಪರವಾಗಿ):– "ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿಯವರಾದ ಅಲೆಮಾರಿ, ಅರೆ–ಅಲೆಮಾರಿ ಜನಾಂಗದವರಿಗೆ ಜಾತಿ ಪ್ರಮಾಣ ಪತ್ರ ಮತ್ತು ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ನೀಡುವ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ:– ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಬಹಳ ಮುಖ್ಯವಾದಂತಹ ಒಂದು ಪ್ರಶ್ನೆ ಇತ್ತು.

ಅಧ್ಯಕ್ಷರು:– ಅಂಕೋಲಾದ ವಿಚಾರ ಇದೆ, ಅದಕ್ಕೆ ಒಂದು ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

ಅಧ್ಯಕ್ಷರು:– ಉತ್ತರ ಇಲ್ಲ. ಪ್ರಶ್ನೋತ್ತರದ ಅವಧಿ ಒಂದು ಗಂಟೆ. ಒಂದು ಗಂಟೆ ಆದ ಮೇಲೆ ಉತ್ತರ ಸಿಕ್ಕಿತೋ ಬಿಟ್ಟಿತೋ ಮುಗಿದು ಹೋಯಿತು.

ಶ್ರೀ ಕೆ.ಎಸ್. ಈಶ್ವರಪ್ಪ:– ಮೊನ್ನೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಚಾರಕ್ಕೆ ಉತ್ತರ ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಸಿನೆಮಾ ಟಾಕೀಸ್ ಮಾಲೀಕರ ವಿಚಾರದ ಬಗ್ಗೆ ಮಾನ್ಯ ಕಂದಾಯ ಸಚಿವರು ಉತ್ತರ ಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು:– ಮಾನ್ಯ ಸಚಿವರು ಬಂದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:– ಕರೆಸಿ ಸಾರ್ ದಯವಿಟ್ಟು.

ಅಧ್ಯಕ್ಷರು:– ನಾನು ಕರೆಸುತ್ತೇನೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) **ವಿಷಯ:**– ಅಂಕೋಲಾ–ಹುಬ್ಬಳ್ಳಿ ರೈಲ್ವೆ ಮಾರ್ಗ ಯೋಜನೆಯನ್ನು ಕೈಬಿಟ್ಟಿರುವ ವರದಿ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲಾ):– ಮಾನ್ಯ ಅಧ್ಯಕ್ಷರೆ, ತಾವು ಅವಕಾಶ ಕೊಟ್ಟದ್ದಕ್ಕೆ ಧನ್ಯವಾದವನ್ನು ಸಲ್ಲಿಸುತ್ತೇನೆ. ನಾನು ನಿನ್ನೆ ಸಂಜೆಯಷ್ಟೇ ಪ್ರಶ್ನೋತ್ತರ ವೇಳೆಯಲ್ಲಿ ಅಂಕೋಲಾ–ಹುಬ್ಬಳ್ಳಿ ರೈಲ್ವೆ ಮಾರ್ಗದ ಕಾಮಗಾರಿಗಳ ವಿವಿಧ ಹಂತಗಳ ಬಗ್ಗೆ ನಾವು ಚರ್ಚೆ